

# ರೊಬಾಟ್ ಭಿಕ್ಕು

ಬೀಜಿಂಗ್ ನ ಹೊರವಲಯದಲ್ಲಿರುವ ಬೌದ್ಧ ದೇವಾಲಯದಲ್ಲಿ ಹೊಸ ಭಿಕ್ಕು ಸೇರಿಕೊಂಡಿದ್ದಾನೆ. ಈತ ಮಂದಿರದ ಸುತ್ತೆಲ್ಲಾ ಓಡಾಡುತ್ತಾನೆ, ಬೌದ್ಧ ಮಂತ್ರಗಳನ್ನು ಜಪಿಸುತ್ತಾನೆ. ಅಷ್ಟೇ ಅಲ್ಲ ಯಾರಾದರೂ ಕುತೂಹಲದಿಂದ ಮಾತಾಡಿಸಿದರೆ ಚೆನ್ನಾಗಿ ಸಂಭಾಷಣೆಯನ್ನೂ ನಡೆಸುತ್ತಾನೆ. ಆದರೆ ಪ್ರವಾಸಿಗರು ಈತನನ್ನು ಮಾತಾಡಿಸಬೇಕೆಂದರೆ ಕೆಳಗೆ ಬಾಗಲೇ ಬೇಕು. ಯಾಕೆಂದರೆ ಈತ ಕೇವಲ 2 ಅಡಿಗಳಷ್ಟೇ ಉದ್ದವಿದ್ದಾನೆ. ಇದರಲ್ಲೇನು ವಿಶೇಷತೆ ಎಂದರೆ, ಇಲ್ಲಿರುವುದು  ಬೌದ್ಧ ಭಿಕ್ಷು ಮಾನವ ಅಲ್ಲವೇ ಅಲ್ಲ! ಲೋಹ ಮತ್ತು ಪ್ಲಾಸ್ಟಿಕ್ ನಿಂದ ಮಾಡಿರುವ ರೊಬಾಟ್ ಭಿಕ್ಕು! ಹಳದಿ ನಿಲುವಂಗಿ ತೊಟ್ಟು ಎದೆಯ ಬಳಿ ಟಚ್ ಸ್ಕ್ರೀನ್‌ಅನ್ನು ಹಿಡಿದಿರುವ ಬೋಳು ತಲೆಯ ಈ ಭಿಕ್ಕುವಿನ ಹೆಸರು ಜಿಯಾನರ್. ದೈನಂದಿನ ಜೀವನದ ಹಾಗೂ ಬೌದ್ಧ ಮತದ ಬಗ್ಗೆ ಸ್ಕ್ರೀನ್‌ನಲ್ಲಿರುವ 20 ಪ್ರಶ್ನೆಗಳಿಗೆ ಈತ ಪಟ ಪಟನೆ ಉತ್ತರಿಸುತ್ತಾನೆ. ಅಲ್ಲದೆ ಗಾಲಿಗಳ ಸಹಾಯದಿಂದ 7 ವಿಧದ ಚಲನೆಯನ್ನೂ ಮಾಡಿ ತೋರಿಸುತ್ತಾನೆ. ಮಾಸ್ಟರ್ ಜಿಯಾಫ್ಯಾನ್ ಎಂಬಾತ ಜಿಯಾನರ್‌ನ ಸೃಷ್ಟಿಕರ್ತ. ವಿಜ್ಞಾನ ಮತ್ತು ಬೌದ್ಧಮತದ ಬೆಸುಗೆಯಾದ ಈ ರೊಬಾಟ್ ಭಿಕ್ಕುವು ಬುದ್ಧನ ಜ್ಞಾನವನ್ನು ಸಮಗ್ರವಾಗಿ ಚೀನಾ ದೇಶದೆಲ್ಲೆಡೆ ಹರಡುತ್ತಾನೆ ಎಂದು ಜಿಯಾಫ್ಯಾನ್ ಹೇಳಿದ್ದಾನೆ.

ಜಿಯಾನರ್, ಬಹಳಷ್ಟು ದಿನಗಳನ್ನು ಮಂದಿರದ ಆಡಳಿತ ಕಚೇರಿಯ ಶೆಲ್ಫ್ ನಲ್ಲಿ ಧ್ಯಾನಿಸುತ್ತಲೇ ಕಳೆದಿದ್ದರೂ ಸೋಷಿಯಲ್ ಮೀಡಿಯಾದಲ್ಲಿ ಈತನ ಬಗ್ಗೆ ಸಾಕಷ್ಟು ಕುತೂಹಲ ಮೂಡಿದೆ.

■ ವಿದ್ಯಾ ವಿ. ಹಾಲಭಾವಿ

